ವ್ಯಾಸರಾಜರನ್ನು ಕುರಿತು –

**ರಾಗ –ಬಿಂಪ್ಲಾಸ್ –  ತಾಳ – ಆದಿತಾಳ**

ಜಯ ಜಯ ವೈಷ್ಣವ ಪಯನಿಧಿ ಚಂದ್ರಗೆ ।
ಜಯ ಜಯ ವ್ಯಾಸಯತೀಂದ್ರರಿಗೆ ।ಪ।
ಜಯ ಜಯ ವರಕರ್ಣಾಟಕ ಪತಿಗೆ ।
ಜಯ ಸಿಂಹಾಸನವೇರಿದವಗೆ ।ಅ.ಪ।
ನಾಕುಶಾಸ್ತ್ರಗಳ ಪಾರಂಗತರಿಗೆ ।
ಕಾಕುಮತಗಳನು ತುಳಿದವಗೆ ।
ಆ ಕಮಲಾಪತಿಭಕುತವರೇಣ್ಯಗೆ ।
ಶ್ರೀಕರ ಚಂದ್ರಿಕಾಚಾರ್ಯರಿಗೆ ।೧।
ಹನುಮನ ಭಾಷ್ಯವ ಅಣಿಮಾಡಿದಗೆ ।
ಹನುಮಗೆ ಭವನಗಳನು ಕಟ್ಟಿದಗೆ ।
ಹನುಮನ ಯಂತ್ರದಿ ಬಿಗಿದಪ್ಪಿದಗೆ ।
ಮುನಿತ್ರಯದಲಿ ಸೇರಿದ ದೊರೆಗೆ ।೨।
ಮಾಯಾವಾದಗಳನು ಗೆಲಿದವಗೆ ।
ಸ್ವೀಯಮತವ ಸ್ಥಾಪಿಸಿದವಗೆ ।
ನ್ಯಾಯಾಮೃತಧಾರೆಯ ಅಭಿಷೇಕದಿ ।
ಆ ಯದುಪತಿಯನು ಕುಣಿಸಿದವಗೆ ।೩।
ಚಕ್ರಧರನ ಸುಳುಗಳ ತಿಳಿದವಗೆ ।
ಮಿಕ್ಕ ಮತಗಳನು ಅಳಿದವಗೆ ।
ವಕ್ರಯುಕುತಿಗಳ ತುಕ್ಕಡಗೈಯುವ ।
ತರ್ಕತಾಂಡವದಿ ನಲಿದವಗೆ ।೪।
ಕೃಷ್ಣದೇವರಾಯನ ಕುಲಪತಿಗೆ ।
ಕಷ್ಟದ ಕುಹಯೋಗವ ಕೊಂದವಗೆ ।
ಶಿಷ್ಟಜನಗಳಿಗೆ ಇಷ್ಟಾರ್ಥಗಳನು ।
ವೃಷ್ಟಿಯಗೈವ ಪ್ರಸನ್ನರಿಗೆ ।೫।

**ರಾಗ – ನಟಭೈರವಿ –ಆದಿತಾಳ**

ಏಸು ಸುಕೃತಫಲವೋ ।
ದರುಶನ ಏಸು ಪುಣ್ಯಕರವೋ । ಪ ।
ಏಸು ಜನ್ಮಗಳ ಸುಕೃತಫಲವೋ ।
ಶ್ರೀವ್ಯಾಸರಾಜ ಗುರುವರ್ಯರ ದರುಶನ । ಅ.ಪ ।
ವರಕರ್ಣಾಟಕ ಸಿಂಹಾಸನದಲಿ ।
ಮೆರೆಯುತಲಿರುವ ಯತೀಂದ್ರರ ದರುಶನ । ೧ ।
ಹಗಲು .ದೀವಟಿಗೆ ಹಸುರು ಛತ್ರಿ ಮುಖ ।
ಬಗೆ ಬಗೆ ಬಿರುದಾವಳಿಗಳ ವೈಭವ । ೨ ।
ರಾಜನ ಕುಹಯೋಗವನೆ ನಿವಾರಿಸಿ ।
ರಾಜಾಧಿರಾಜ ಸಂಪೂಜ್ಯರ ದರುಶನ । ೩ ।
ರುಕುಮಿಣಿಭಾಮಾರಮಣನ ಪೂಜಿಸಿ ।
ಸುಕೃತ ಸ್ವರೂಪ ಪ್ರಸನ್ನರ ದರುಶನ । ೪ ।

---

**ರಾಗ – ಶಂಕರಾಭರಣ – ಆದಿತಾಳ**

ಹರ ನಮ: ಪಾರ್ವತೀಪತಯೇ ನಮೋ ।
ಹರ ನಮ: ಪಾರ್ವತೀಪತಯೇ । ಪ ।
ಹರಹರ ಶಂಕರ ಶಂಭೋ ಮಹಾದೇವ ।
ಹರ ನಮ: ಪಾರ್ವತೀಪತಯೇ । ಅ.ಪ ।
ಹರಿಯ ಪಾದೋದಕ ಶಿರದಲಿ ಧರಿಸಿದ ।
ಪರಮವೈಷ್ಣವ ನಿನ್ನ ಚರಣಗಳಿಗೆ ನಮೋ । ೧ ।
ಅತ್ರಿಯ ಪತ್ನಿಯ ಉದರದಿ ಜನಿಸಿದ ।
ದತ್ತನಾಮಕ ಹರಿ ಭ್ರಾತ ದೂರ್ವಾಸನೆ । ೨ ।
ಹರಿಯು ಪ್ರಸನ್ನನಾಗುವ ತೆರದಲಿ ಮನ ।
ಕರುಣಿಸೋ ಉರಗಭೂಷಣ । ಗಿರಿಜಾಪತೆ । ೩ ।

---

**ರಾಗ – ಬಿಲಹರಿ – ಅದಿತಾಳ**

ಹನುಮನ ಮನೆಯವರು – ನಾವೆಲ್ಲರೂ ।
ಹನುಮನ ಮನೆಯವರು । ಪ ।
ಅನುಮಾನ ಪಡದೆಲೆ ಸ್ಥಳವ ಕೊಡಿರಿ ಎಮಗೆ । ಅ.ಪ ।

ಊರ್ಧ್ವಪುಂಡ್ರವ ನೋಡಿ ಶ್ರದ್ಧೆಭಕುತಿ ನೋಡಿ ।
ಹೃದ್ಗತವಾದೆಮ್ಮ ತತ್ತ್ವಗಳನೆ ನೋಡಿ ।
ಇದ್ದುದನಿಲ್ಲೆಂಬ ಅಬದ್ಧ ನುಡಿವರಲ್ಲಾ ।
ಮಧ್ವಮುನಿಯು ನಮ್ಮ ತಿದ್ದಿರುವುದ ನೋಡಿ । ೧ ।

ಸತ್ಯಮಿಥ್ಯಗಳಿಗೆ ಅಂತರ ಬಲ್ಲೆವು ।
ಉತ್ತಮ ನೀಚರೆಂಬುವ ಭೇದ ಬಲ್ಲೆವು ।
ಸುತ್ತಲೂ ಕಂಡು ಕಾಣದೆ ಇಹ ಇಲ್ಲಕ್ಕೂ ।
ಉತ್ತಮನೊಬ್ಬನೇ ಹರಿಯೆಂದು ನಲ್ಲೆವು । ೨ ।

ಹಲವು ಲೋಕಗಳುಂತೆಂಬುದ ಬಲ್ಲೆವು ।
ಹಲವು ಯೋನಿಗಳಲ್ಲಿ ಜನ್ಮಗಳೊಲ್ಲೆವು ।
ಅಲವಭೋಧರು ನಮ್ಮ ಕಳುಹಿದರಿಲ್ಲಿಗೆ ।
ತಿಳಿಸಿ ಪ್ರಸನ್ನ ಶ್ರೀ ಹರಿಗೆ ವಿಚಾರವ । ೩ ।

**ರಾಗ – ತೋಡಿ, ಆದಿತಾಳ**

ಎಂಥ ವೈರಾಗ್ಯ ಹನುಮಂತ ।
ಎಂಥ ಸೌಭಾಗ್ಯ ಗುಣವಂತ ।ಪ।
ಸಂತತ ರಾಘವನಂಘ್ರಿ ಕಮಲದಲಿ ।
ಅಂತರಂಗ ಭಕುತಿಯ ಬೇಡಿದೆಯೋ ।ಅ.ಪ।

ಆವರಿಹರು ನಿನ್ಹೊರತು ರಾಘವರ ।
ಭಾವವರಿತು ಪ್ರತಿ ಕ್ಷಣಗಳಲಿ ।
ಸೇವೆ ಸಲ್ಲಿಸಿ ದಯಪಡೆಯಲು । ಭೋಗವ ।
ದಾವದನುಭವಿಸೆ ದುರ್ಲಭವು ।
ಜೀವೋತ್ತಮನದ ಬಯಸದೆ ಏಕೋ ।
ಭಾವದಿ ಪದಸೇವೆಯ ಕೇಳಿದ ವೀರ ।೧।
ಜ್ಞಾನಪಾರಕ್ರಾಅಮ ಧೈರ್ಯವೀರ್ಯಕಧಿ ।
ಷ್ಠಾನ ಪವನಸುತ ಜಗತ್ರಾಣ ।
ನೀನಲ್ಲದೆ ಖಗಮೃಗ ಸುರನರುಗ ।
ಳೇನು ಚಲಿಸಬಲ್ಲಿರೋ ಹನುಮ ।
ಪ್ರಾಣಭಾವಿ ಚತುರಾನನ ಭುವಿಯೊಳ–
ಗೇನು ರುಚಿಯೋ ಕಲ್ಯಾಣಚರಿತ ನಿನಗೆ ।೨।
ಕಪಿರೂಪದಿ ದಶಕಂಧರನ ಮಹಾ
ಅಪರಾಧಕೆ ಶಿಕ್ಷೆಯನಿತ್ತೆ ।
ನೃಪರೂಪದಿ ದುರ್ಯೋಧನನಸುವನು ।
ಅಪಹರಿಸಿದೆಯೋ ಬಲಭೀಮ ।
ವಿಪುಲ ಪ್ರಮತಿ ವರವೈಷ್ಣವತತ್ತ್ವಗ–
ಳುಪದೇಶಿಸಿದ ಪ್ರಸನ್ನ ಯತಿವರೇಣ್ಯ ।೩।

## ರಾಗ – ಷಣ್ಮುಖಪ್ರಿಯ – ಆದಿತಾಳ

ಜನುಮ  ಜನುಮದಲಿ ಎನಗಿರಲಿ । ಪ ।
ಹನುಮ ಭೀಮ ಮಧ್ವಮುನಿಗಳ ಸೇವೆಯು । ಅ.ಪ ।

ಮಾತರಿಶ್ವ ನೀ ಪ್ರೀತನಾಗೆ ಅಜ ।
ತಾತನು ಸುಲಭದಿ ಒಲಿಯುವನು ।
ಕೋತಿಯ ರೂಪದಿ ಭೂತಲದಲಿ ಬಲು ।
ಖ್ಯಾತಿಪಡೆದ ರಾಮದೂತರ ಸೇವೆಯು । ೧ ।

ಹರನಭಕುತ ಜರಾಸಂಧನ ಕಾಯವ ।
ಹರಿದು ಮುರಿದು ಬಲು ಸುಲಭದಲಿ ।
ಹರಿಗಪರೋಕ್ಷದಿ ಅರ್ಪಣೆ ಮಾಡಿದ ।
ಕುರುಕುಲಪತಿ ಬಲಭೀಮರ ಸೇವೆಯು । ೨ ।

ಶುದ್ಧದ್ವಿಜಕುಲದಿ ಉದ್ಭವಿಸುತ ಅನಿ–
ರುದ್ಧನಿಗನುಮತವಾಗಿರುವ ।
ಸಿದ್ಧಾಂತದ ಪದ್ಧತಿಯನು ತೋರಿದ ।
ಮಧ್ವಮತದ ತತ್ವದಲಿ ಪ್ರಸನ್ನತೆ । ೩ ।

---

## ರಾಗ – ಸಿಂಧುಭೈರವಿ – ಆದಿತಾಳ

ಹನುಮಾನ್ ಕೀ ಜೈ । ಹನುಮಾನ್ ಕೀ ಜೈ ।
ಹನುಮಾನ್ ಕೀ ಜೈ । ಹನುಮಾನ್ ಕೀ ಜೈ । ಪ ।
ಥೈ ಥೈ ಥೈ ಥೈ ಥೈತಕ ಥೈಥಕ ।
ತಕಿಟತಕಿಟ ತಕ ಜೈ ಹನುಮಾನ್ । ಅ.ಪ ।
ಹರಿಸರ್ವೋತ್ತಮನೆಂಬುವ ತತ್ತ್ವಕೆ ಜಯ ।
ಭೇರಿಯ ಹೊಡೆದೆಯೋ ಹನುಮಾನ್ ।

ಢಣಢಣಢಣಢಣಢಣಢಣ ।
ಢಣ ಜಯಭೇರಿಯ ನಾದವು ಕೇಳುತಿದೆ । ೧ ।
ವೈಷ್ಣವ ತತ್ತ್ವಗಳನು ಬೋಧಿಸಿ ಜಯ ।
ಭೇರಿಯ ಹೊಡೆದೆಯೋ ಬಲ ಭೀಮ ।
ಢಣಢಣಢಣಢಣಢಣಢಣ ।
ಢಣ ಜಯಭೇರಿಯ ನಾದವು ಕೇಳುತಿದೆ । ೨ ।
ಮೋಕ್ಷಕೆ ಒಳ್ಳೆಯ ಮಾರ್ಗವ ತೋರುತ ।
ಜಯಭೇರಿಯ ಹೊಡೆದೆಯೋ ಮಧ್ವ ।
ಢಣಢಣಢಣಢಣಢಣಢಣ ।
ಢಣ ಜಯಭೇರಿಯ ನಾದವು ಕೇಳುತಿದೆ । ೩ ।
ಅಂದಿನ ನಾದವು ಇಂದು ನುಡಿಯುತಿರೆ ।
ಮಂದಿಗಳೆಲ್ಲರು ಕೇಳುವರು ।
ತಂದೆ ಪ್ರಸನ್ನರ ಮಂದಿರದಲಿ ಇದು ।
ಎಂದೆಂದಿಗೂ ಶಾಶ್ವತವಿರಲಿ । ೪ ।

---

## ರಾಗ – ಪೀಲು – ಆದಿತಾಳ

ಕವಳ ತಾಯಿ ಕವಳ ಅಮ್ಮ । ಪ ।
ಪಾಪಿ ಪರದೇಶಿಯ ಮರಿಬೇಡಿರಮ್ಮ । ಅ.ಪ ।

ಸಂಜೆಯ ಕವಳಕ್ಕೆ ಸಾವಿರ ಆಪತ್ತು ।
ಅಂಜಿ ಓಡುವುದೆಂದು ಕೇಳಿಲ್ಲವೇನಮ್ಮ ।
ಭುಂಜಿಸಿ ನಿಮ್ಮಯ ಪತಿಯ ಪ್ರಸಾದದ ।
ಎಂಜಲು ಎನಗಿಷ್ಟು ಜೋಳಿಗೆಗಿಕ್ರವ್ವ । ೧ ।

ನಮದೊಂದು ಸಂಸಾರ ಬಲುದೊಡ್ಡದವ್ವ ।
ಶ್ರಮಿಸುವರದೊಳಗೊಬ್ಬರಿಲ್ಲವ್ವ ।

ಕಮಲವ್ವ ನಿಮ್ಮ ಯ ಅಮೃತಹಸ್ತದ ಕವಳ ।
ಎಮಗೊಂದು ಕ್ಷಣದಲಿ ಅಮೃತವಾಗೋದವ್ವ । ೨ ।

ಮಿತಿಯಿಲ್ಲದೈಶ್ಚ್ವರ್ಯ ನಿಮಗಿಹುದೆಂದು ।
ಕ್ಷಿತಿಯೊಳು ಜ್ಞಾನಿಗಳಾಡುತಲಿಹರು ।
ಅತುಲ ಮಹಿಮ ನಿಮ್ಮ ಪತಿಯ ಪ್ರಸಾದವ ।
ಪ್ರತಿದಿನವಿತ್ತು ಪ್ರಸನ್ನರಾಗಿರವ್ವ । ೩ ।

## ರಾಗ – ಸಿಂಧುಭೈರವಿ – ಆದಿತಾಳ

ಎಂಥ ಚತುರ ನಿನ್ನ ಮಗನು । ಪ ।
ಎಂಥ ವಂಚಕನೇ ಯಶೋದೆ । ಅ.ಪ ।
ಸದಾನಂದ ಪೂರ್ಣ ಎಮ್ಮ ಹೃದಯದಲ್ಲಿಹನೇ ಯಶೋದೆ । ೧ ।
ಕಾರ್ಯಾಕಾರ್ಯ ಗಮನವಿಡದೆ ಧೈರ್ಯದಲಿ ನುಡಿದ ಸರಸವ । ೨ ।
ಮುಂದೆ ಗತಿಯ ಕೊಡುವೆ ನಿಮಗೆ ಎಂದು ಪೇಳಿದನೇ ಯಶೋದೆ । ೩ ।
ಅಂದ ನುಡಿಗೆ ಮನವ ಜರಿದು ಸಂಧಿ ಮಾಡಿದನೇ ಯಶೋದೆ । ೪ ।
ಕ್ಷಿಪ್ರದಲ್ಲಿ ತೋರೆ ಇವನ ಸುಪ್ರಸನ್ನಮುಖಿ ಯಶೋದೆ । ೫ ।

---

## ರಾಗ – ಖರಹರಪ್ರಿಯ – ಆದಿತಾಳ

ನಗುಮೊಗ ಚಂದಿರ ಸೊಗಸುಗಳಿಗೆ ಬಲು ।
ಮುಗಿಬೀಳುತಲಿಹರೋ ನೀ ಸಿಗದಿರೋ । ಪ ।

ಹಗರಣದಲ್ಲಿ ಪನ್ನಗವೇಣಿಯರು ।
ಸಿಗಲು ಆಗಲೇ ಬಲು ರಗಳೆ ಮಾಡುವರು । ಅ.ಪ ।

ಬಲಪೂತನಿಯೊಮ್ಮೆ ಲಲನೆಯ ವೇಷದಿ ।
ಬಲು ಮೋಸದಿ ವಿಷವೊಲೆಯನು ಉಣಿಸಿದ್ದು ।

ತಿಳಿದು ತಿಳಿದು ಮತ್ತೆ ಒಲಿಯಲು ಬಯಸುವ ।
ಲಲನೆಯರಿಗೆ ನಿನ್ನ ಸುಳುವನು ಕೊಡದಿರೋ । ೧ ।

ಪತಿಗಳ ತ್ಯಜಿಸುವ ಸತಿಜನರಿರುವರು ।
ಅತಿ ಮೋಸದಿ ನಿನ್ನ ಹಿತವ ಬಯಸುವರು ।
ಮತಿಗೊಟ್ಟರೆ ಇವರು ಅತಿ ಸುಲಭದಿ ನಿನ್ನ ।
ರತಿಯಲಿ ಸಂಸಾರ ಚ್ಯುತಿಯ ಪೊಂದುವರು । ೨ ।

ಬೆಣ್ಣೆಯ ಕೊಡುವೆವು ಚಿನ್ನ ಬಾಲನೇ ಬಾ ।
ರೆನ್ನುತ ಕರೆವರು ಕನ್ಯೆಯರುಗಳು ।
ಸಣ್ಣ ಲೋಭಕೆ ಇವರನ್ನು ಸೇರಿದರೆ ಪ್ರ।
ಸನ್ನನಾಗದಿರೆ ನಿನ್ನನು ಬಿಡರೋ । ೩ ।

---

## ರಾಗ– ಹುಸೇನಿ – ಆದಿತಾಳ

ಬಾರೆ ಸಖಿ ಪೋಗಿ ರಾಸಕ್ರೀಡೆಯಾಡುವ । ಪ ।

ಸಾರಸಾಕ್ಷ ಕೃಷ್ಣನು ತಾ ಕೊಳನೂದುವ । ಅ.ಪ ।

ಜಾರನೆಂದು ಸಣ್ಣ ಮಾತನಾಡಿದಾಯಿತು ।
ಚೋರನೆಂದು ಬಹಳ ದೂರು ಮಾಡಿದ್ದಾಯಿತು ।
ಮೂರು ನಿಮಿಷ ಅವನ ಮರೆಯಲಾಗದಾಯಿತು ।
ಬೀರುತಿರುವ ಮೋಹಜಾಲ ಸಡಲದಾಯಿತು । ೧ ।

ಯಾವನೀತನೆಂದು ಚಿಂತೆ ಮಾಡಿದ್ದಾಯಿತು ।
ಗೋವಳನಿವನಲ್ಲವೆಂದು ನಿರ್ಧರಾಯಿತು ।
ಯಾವನಾದರೇನು ಇವನ ಕ್ಷಣವೂ ಕಾಣದೆ ।
ಜೀವನ ಕಳೆಯುವುದೇ ದೊಡ್ಡ ಭಾರವಾಯಿತು । ೨ ।

ಮಂದಹಾಸದಿಂದ ಸಕಲ ಜಗವ ಬೆಳಗುವ ।
ಚಂದ್ರನು ತಾನಿವನ ನೋಡಿ ಬಹಳ ನಾಚುವ ।

ಸಾಂದ್ರವಾಯಿತಂತರಿಕ್ಷ ಮಧುರ ನಾದದಿ ।
ಮಂದ ಮಲಯಮಾರುತ ತಾ ತಲೆಯನಾಡುವ । ೩ ।

ಸಕಲಲೋಕನಾಥನೀತನೆಂದು ತಿಳಿಯಿತು ।
ಸಕಲವನರ್ಪಿಸುವುದೊಂದೆ ಮಾರ್ಗ ಉಳಿಯಿತು ।
ಲಕುಮಿ ಮುರಳಿರೂಪದಲಿ ಇಹುದು ಹೊಳೆಯಿತು ।
ಭಕುತಿ ಹರಿದು ಎನ್ನ ಮನ ಪ್ರಸನ್ನವಾಯಿತು ।

---

ರಾಗ – ನಾದನಾಮಕ್ರಿಯೆ – ಆಟತಾಳ

ಹೊಟ್ಟೆಗೆ ಹಿಟ್ಟಿಲ್ಲ ನಿನ್ನಯ ಜುಟ್ಟಿಗೆ ಮಲ್ಲಿಗೆಯು । ಪ ।
ಉಟ್ಟಿರುವುದು ಶತಛಿದ್ರದ ವಸ್ತ್ರವು ।
ತೊಟ್ಟಿರುವುದು ಜರತಾರಿಯ ಅಂಗಿಯು ।ಅ.ಪ।
ಮಾತೆಯ ಗರ್ಭದಲಿ ವಿಧವಿಧ ಯಾತನೆಯನನುಭವಿಸಿ ।
ಭೂತಲದಲಿ ಮದಮತ್ಸರ ಲೋಭಕೆ ।
ಸೋತು ಮನವ ನಿರ್ಭೀತಿಯಿಂದಿರುವೆಯೋ । ೧ ।
ದಿನಗಳು ಕಳೆಯುತಿರೆ ಲೋಕದ ಪ್ರಣಯವು ಹೆಚ್ಚುತಿದೆ ।
ತನಯತರುಣಿ ಮನೆಕನಕಗಳೆಲ್ಲವು ।
ಕನಸಿನ ತೆರದಲಿ ಕ್ಷಣಿಕವೆಂದರಿಯದೆ । । ೨ ।
ಇದು ನ್ನದೆಂಬ ಅನುಭವ ಮಂಗನ ಹಿಗ್ಗಟೆಯು ।
ಇಂದಿರೆಯರಸನ ಪರಮ ಪ್ರಸನ್ನತೆ ।
ಪೊಂದಿದ ಪುರುಷನೆ ಜೀವನ್ಮುಕ್ತನು । । ೩ ।

ರಾಗ – ಅಠಾಣ – ಆದಿತಾಳ

ಎಲ್ಲರ ಮನೆ ದೋಸೆ ತೂತು । ಪ ।
ಂಲ್ಲರೆಯಲ್ಲವಿದೀಮಾತು । ಅ.ಪ ।

ಗಾಜಿನ ಮನೆಯಲಿ ವಾಸಿದುವ ಪರ–
ಗೇಹಕೆ ಕಲ್ಲುಗಳೆಸೆಯಬಹುದೇ ।
ಮೂರ್ಜಗನಿಂದಕ ತನ್ನಯ ನಾಶಕೆ ।
ಬೀಜ ಬಿತ್ತಿ ಫಲ ಭೋಜನ ಮಾಡುವ । ೧ ।

ನೀರಕ್ಷೀರ ನ್ಯಾಯವ ಕೇಳದ ಜನ–
ರ್ಯಾರಿರುವರು ಈ ಧರೆಯೊಳಗೆ ।
ಬಾರಿಬಾರಿಗದ ಮನಕೆ ತಾರದೆಲೆ ।
ದೂರಿನ ನುಡಿಯಲಿ ರುಚಿಯು ಉಚಿತವೆ । ೨ ।
ಗೂಳಿಯು ಹಳ್ಳಕೆ ಬಿದ್ದ ಕಾಲದಲಿ ।
ಆಳಿಗೊಂದು ಕಲ್ಲೆಸೆಯುವರು ।
ಬಾಳಿ ಬಾಳಿಸುವ ನರನ ಪ್ರಸನ್ನನು ।
ಕಾಲಕಾಲದಲಿ ಸಲಹದೇ ಇರುವನೆ । । ೩ ।

---

ರಾಗ – ಕಾಪಿ – ಆದಿತಾಳ

ಹೂ ಬೇಕೆ ಹೂವು ಪರಿಮಳದ ಹೂವು । ಪ ।
ಪರಮಪುರುಷ ನಮ್ಮ ಕೃಷ್ಣನ ತೋಟದ । ಅ.ಪ ।

ಮಲ್ಲಿಗೆ ಸಂಪಿಗೆ ಜಾಜಿ ಸೇವಂತಿಗೆ ।
ಮಲ್ಲೆ ಗುಲಾಬಿ ತಾವರೆ ಪಾರಿಜಾತ ।
ಎಲ್ಲ ವಿಧದ ಮನಕ್ಲೇಶವ ಕಳೆಯಲು ।
ಫುಲ್ಲಲೋಚನ ನಮ್ಮ ಕೃಷ್ಣನ ಧರಿಸಿದ । ೧ ।

ದಾರದಿ ಕಟ್ಟಿಲ್ಲ ಮಾರು ಹಾಕುವುದಲ್ಲ ।
ಕೇರಿಕೇರಿಗಳಲ್ಲಿ ಮಾರುವುದಲ್ಲ ।

ಭೂರಿಭಕುತಿ ಎಂಬ ಭಾರಿಯ ಬೆಲೆಗಿದ ।
ಮಾರೆಂದು ಪೇಳಿದ ಶೌರಿಯ ಸೊಬಗಿನ ।೨।

ರಂಗುರಂಗುಗಳಿಂದ ಕಂಗೊಳಿಸುವ ಸ್ವಚ್ಛ ।
ಬಂಗಾರದ ಛವಿ ಹಂಗಿಸುವ ।
ಶೃಂಗಾರಸಿಂಧು ಪ್ರಸನ್ನ ಶ್ರೀ ಮಾಧವ-
ನಂಘ್ರಿಯ ಸಂಗದಿ ಮಂಗಳಕರವಾದ ।೩।

---

ರಾಗ – ಬಿಂಪ್ಲಾಸ್ – ಆದಿತಾಳ

ಮುರಳಿಯ ನಾದವ ಕೇಳಿ ಬನ್ನಿರಿ ।ಪ।
ಮುರಳಿಯ ನಾದವ ಕೇಳಿ ।ಅ.ಪ।
ಮಧುರಾನಾಥನು ಮುರಳಿಯನೂದಲು ।
ಸುರಿವುದಾನಂದಜಲ ನಯನದಲಿ ।೧।
ಕಂಗೊಳಿಸುವ ಬೆಳದಿಂಗಳ ಸೊಬಗಿಲಿ ।
ತಂಗಾಳಿಯ ಸುಖದಿ ಶ್ರೀರಂಗನ ।೨।
ಶ್ಯಾಮಲಾಂಗನು ತನ್ನ ಕೋಮಲ ಕರದಲಿ ।
ಆ ಮುರಳಿಯ ಪಿಡಿಯೆ ಹೃದಯದಲಿ ಪ್ರೇಮವು ತುಂಬುವುದು ।೩।
ಪಂಚಬಾಣನ ಪಿತ ಮುರಳಿಯ ಮಧುರಸ ।
ಹಂಚಲೆಮಗೆ ರೋಮಾಂಚವಾಗುವುದು ।೪।
ರಜನೀಕಾಂತನ ಕುಲದಲಿ ಜನಿಸಿ ।
ವ್ರಜಜನಗಳಿಗಧಿಕ ಪ್ರಸನ್ನನ ।೫।

---